**ಅ. ದಾ. ಸಂ. ಃ 147 / 2014**
**ಡಿ.ಡಬ್ಲ್ಯೂ ಃ 01**

**ದಿನಾಂಕ ಃ 04-03-2022 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ- ವಾದಿಯ ಪರ ಶ್ರೀ. ಎ.ಎಸ್.ಎಸ್. ವಕೀಲರಿಂದ ಃ-**

ವಾದಿಯವರು ಏನು ಪರಿಹಾರ ಕೋರಿ ದಾವೆ ಹೂಡಿರುತ್ತಾರೆಂದು ತಿಳಿದುಕೊಂಡಿರುತ್ತೇನೆ. ಸದರಿಯವರು ನಮ್ಮ ಮನೆಯನ್ನು ಅವರ ಹೆಸರಿಗೆ ನೊಂದಣಿ ಮಾಡಿಕೊಟ್ಟಿದ್ದೇವೆ ಎಂದು ಹೂಡಿರುತ್ತಾರೆ. ದಾವೆ ಹೂಡುವ ಪೂರ್ವದಲ್ಲಿ ವಾದಿಯರು ಲೀಗಲ್ ನೋಟಿಸ್ ನೀಡಿದ್ದರು ಎಂದರೆ ಸರಿ. ಸದರಿ ನೋಟಿಸಿಗೆ ನಾವು ಪ್ರತ್ಯುತ್ತರ ನೀಡಿದ್ದೇವೆ ಎಂದರೆ ಸರಿ. ಸದರಿ ನೋಟಿಸಿಗೆ ನನ್ನ ತಾಯಿ ಮಾಹಿತಿ ನೀಡಿರುತ್ತಾರೆ. ಪ್ರತಿವಾದಪತ್ರಕ್ಕೆ ಮಾಹಿತಿಯನ್ನು ನಾನು ಮತ್ತು ನನ್ನ ತಾಯಿ ಮಾಹಿತಿ ನೀಡಿರುತ್ತೇವೆ.

2. ದಿಃ 29-09-2011 ರಂದು ಕ್ರಯದ ಕರಾರುಪತ್ರ ಆಗಿದೆ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರಪತ್ರದಲ್ಲಿ ನಾನು ಪಕ್ಷಗಾರರಲ್ಲ ಹಾಗೂ ನಾನು ಸಹಿ ಮಾಡಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿಯು ಸುಳ್ಳು ಕ್ರಯದ ಕರಾರುಪತ್ರವಾಗಿದೆ ಎನ್ನುತ್ತಾರೆ. ಸದರಿ ಕ್ರಯದ ಕರಾರುಪತ್ರವನ್ನು ನನ್ನ ತಂದೆ ಮತ್ತು ತಾಯಿ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 2011 ನೇ ಇಸವಿಯಲ್ಲಿ ನಾನು ನನ್ನ ತಂದೆ-ತಾಯಿಯೊಂದಿಗೆ ವಾಸಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು 2011 ರ ಅವಧಿಯಲ್ಲಿ ನನ್ನ ತಂದೆ ತಾಯಿಯೊಂದಿಗೆ ಮಾಗಡಿಯಲ್ಲಿ ವಾಸಿಸುತ್ತಿದ್ದೆ ಎಂದು ತೋರಿಸಲು ದಾಖಲಾತಿ ಹಾಜರು ಪಡಿಸುತ್ತೇನೆ. 2011 ರಲ್ಲಿ ನಾನುಮಾಗಡಿಯಲ್ಲಿ ವಾಸಿಸುತ್ತಿರಲಿಲ್ಲ ಮತ್ತು ಕ್ರಯದ ಕರಾರುಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕ್ರಯದ ಕರಾರುಪತ್ರ ಆಗಿಲ್ಲದೇ ಇರುವುದರಿಂದ ಮಾಹಿತಿ ತಿಳಿಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎನ್ನುತ್ತಾರೆ.

3. ದಾವ ಸ್ವತ್ತು ನನ್ನ ತಂದೆಯು ನನ್ನ ತಾಯಿಗೆ ಖರೀದಿ ಮಾಡಿ ಕೊಟ್ಟಿರುತ್ತಾರೆ. ದಾವ ಸ್ವತ್ತು ನನ್ನ ತಾಯಿಯ ಹೆಸರಿನಲ್ಲಿದೆ ಎಂದರೆ ಸರಿ. ನಿಪಿ-01 ರ

ಕ್ರಯದ ಕರಾರಿನಲ್ಲಿರುವ ನನ್ನ ತಂದೆ ತಾಯಿಯ ಸಹಿಯನ್ನು ನಿರಾಕರಿಸಿರುವ ಸಂಬಂಧ ನಾನು 2011 ರಲ್ಲಿನ ನನ್ನ ತಂದೆ ತಾಯಿ ಸಹಿ ಮಾಡಿದ ಬೇರೆ ದಾಖಲಾತಿಯನ್ನು ಹಾಜರು ಪಡಿಸುತ್ತೇನೆ. ನಿಪಿ-01 ರ ಕ್ರಯದ ಕರಾರು ಪತ್ರವನ್ನು 1 ಲಕ್ಷ 60 ರೂಪಾಯಿಗೆ ಮಾತುಕತೆಯಾಗಿ, 1 ಲಕ್ಷ ಹಣವನ್ನು ಮುಂಗಡವಾಗಿ ಪಡೆದು ಕ್ರಯದ ಕರಾರುಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರದ ಅಡಿಯಲ್ಲಿ 2011 ರಲ್ಲಿಯೇ ಸ್ವಾಧೀನ ಬಿಟ್ಟುಕೊಡಲಾಗಿದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಮಾನವಿಯತೆ ಆಧಾರದ ಮೇಲೆ ಬಿಟ್ಟುಕೊಟ್ಟಿದ್ದು, ಪತ್ರವನ್ನು ನೀವು ಸೃಷ್ಟಿ ಮಾಡಿರುತ್ತೀರಿ ಎನ್ನುತ್ತಾರೆ. ಯಾವುದೇ ಮಾನವಿಯತೆ ಆಧಾರದ ಮೇಲೆ ಬಿಟ್ಟುಕೊಟ್ಟಿರದೇ ಮುಂಗಡ ಹಣ ಪಡೆದು ನಿಪಿ-1 ರ ಕ್ರಯದ ಕರಾರುಪತ್ರದ ಅಡಿಯಲ್ಲಿ ಬಿಟ್ಟುಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**